**ಸಾಕ್ಷಿಯನ್ನು ದಿನಾಂಕ 07.01.2026 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ಅಪಘಾತದ ಸ್ಥಳದ ಬಳಿ ಇದ್ದವರು ಅಪಘಾತದ ಬಗ್ಗೆ ನನಗೆ ಫೋನ್ ಮೂಲಕ ತಿಳಿಸಿದರು. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತ ಹೇಗೆ, ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ ಅಂದರೆ ಸರಿ. ಅಪಘಾತ ಯಾವ ವಾಹನದಿಂದ ಆಗಿರುತ್ತದೆ ಎಂದು ಠಾಣೆಯಲ್ಲಿ ಸಲ್ಲಿಸಿದ ದೂರಿನಲ್ಲಾಗಲೀ, ಪ್ರಥಮ ವರ್ತಮಾನ ವರದಿಯಲ್ಲಾಗಲೀ ನಮೂದಿಸಿರುವುದಿಲ್ಲ ಅಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಯಾವುದೋ ವಾಹನದಿಂದ ಅಪಘಾತವಾಗಿರುವುದಾಗಿ ನಿ.ಪಿ.1 ಮತ್ತು 2 ರಲ್ಲಿ ಬರೆಯಲಾಗಿದೆ ಅಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ದಾಖಲೆಗಳಲ್ಲಿನ ಅಂಶಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಟಾಟಾ ಏಸ ವಾಹನದಿಂದ ಅಪಘಾತವಾಗಿರುವುದಾಗಿ ನಿ.ಪಿ.1 ಮತ್ತು 2 ರಲ್ಲಿ ಹೇಳಿರುವುದಿಲ್ಲ ಅಂದರೆ ಸರಿಯಲ್ಲ.

ಅಪಘಾತ ಧಾರವಾಡ ಉಪ್ಪಿನಬೇಟಗೇರಿ ರಸ್ತೆಯಲ್ಲಿ ಆಗಿರುತ್ತದೆ. ಅಪಘಾತ ಸಂಜೆ 6 ಗಂಟೆಗೆ ಆಗಿರುತ್ತದೆ ಅಂದರೆ ಸರಿ. ಅಪಘಾತವಾದ ರಸ್ತೆಯಲ್ಲಿ ಹೆಚ್ಚಿನ ಜನ ಮತ್ತು ವಾಹನ ಓಡಾಟ ಇರುವುದಿಲ್ಲ ಅಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಸ್ಥಳದಲ್ಲಿ ಯಾರೂ ಇರಲಿಲ್ಲ ಅಂದರೆ ಸರಿಯಲ್ಲ. ಅಪಘಾತ ಟಾಟಾ ಏಸ್ ವಾಹನದಿಂದ

ಆಗಿರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ಅಪಘಾತವನ್ನು ನೋಡಿದ ಯಾವುದೇ ಪ್ರತ್ಯಕ್ಷ ಸಾಕ್ಷಿದಾರರು ಇರುವುದಿಲ್ಲ ಅಂದರೆ ಸರಿಯಲ್ಲ. ಅಪಘಾತ ನನ್ನ ಗಂಡನ ತಪ್ಪಿನಿಂದಲೂ ಆಗಿರುವುದಾಗಿ ಅವರ ವಿರುದ್ಧ ಅಂತಿಮ ವರದಿ ಸಲ್ಲಿಸಲಾಗಿರುತ್ತದೆ ಅಂದರೆ ಸರಿಯಲ್ಲ. ಅಂತಿಮ ವರದಿಯಲ್ಲಿ ನನ್ನ ಗಂಡನನ್ನು 2 ನೇ ಆರೋಪಿಯನ್ನಾಗಿ ತೋರಿಸಿರುತ್ತಾರೆ ಅಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನ್ನ ಗಂಡ ಮದ್ಯಪಾನ ಮಾಡಿಕೊಂಡು ಬೈಕ್ ಚಾಲನೆ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಆ ರೀತಿ ಬೈಕ್ ಚಾಲನೆ ಮಾಡಿಕೊಂಡು ಬಂದು ನನ್ನ ಗಂಡನೇ ಬಿದ್ದು ಏಟು ಮಾಡಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಟಾಟಾ ಏಸ ವಾಹನದಿಂದ ಅಪಘಾತವಾಗಿರುವುದಿಲ್ಲ ಅಂದರೆ ಸರಿಯಲ್ಲ.

ನನ್ನ ಗಂಡನಿಗೆ ಬೈಕ್ ಚಾಲನೆ ಮಾಡಲು ಡಿ.ಎಲ್.ಇಲ್ಲದಿದ್ದು ಬೈಕಿಗೆ ವಿಮೆ ಇಲ್ಲದಿದ್ದು ಪರಿಹಾರ ಬರುವುದಿಲ್ಲವೆಂದು ನಾವು ಮತ್ತು 1 ನೇ ಎದುರುದಾರರು ಮಿಲಾಪಿಯಾಗಿ ಟಾಟಾ ಏಸ ವಾಹನವನ್ನು ಅಪಘಾತದಲ್ಲಿ ಅಳವಡಿಸಿರುತ್ತೇವೆ ಅಂದರೆ ಸರಿಯಲ್ಲ. ಅಪಘಾತದಲ್ಲಿ ಸದರಿ ಟಾಟಾ ಏಸ ವಾಹನ ಭಾಗಿಯಾಗದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಅಪಘಾತ ಕಾಲಕ್ಕೆ ನನ್ನ ಗಂಡ ಗೌಂಡಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ತಿಂಗಳಿಗೆ ರೂ.20 ಸಾವಿರ ಆದಾಯ ಗಳಿಸುತ್ತಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಅಪಘಾತ ಕಾಲಕ್ಕೆ ನಾನು ಕೆಲಸಕ್ಕೆ ಹೋಗುತ್ತಿದ್ದೆ ಅಂದರೆ ಸರಿ. ನನ್ನ ಗಂಡ ದುಶ್ಚಟಕ್ಕೆ ಬಲಿಯಾಗಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ, ಆದ್ದರಿಂದ ನಾನೇ ದುಡಿದು ಅವರನ್ನು ನೋಡಿಕೊಳ್ಳುತ್ತಿದ್ದೆ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲೆಂದು ನನ್ನ ಗಂಡ ಕೆಲಸ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಮ್ಮ ಕುಟುಂಬದ ಸದಸ್ಯರ ಬಗ್ಗೆ ತೋರಿಸಲು ಪಡಿತರ ಚೀಟಿಯನ್ನು ಹಾಜರುಪಡಿಸಬಹುದು. ಅಪಘಾತ ಕಾಲಕ್ಕೆ ನನ್ನ ಗಂಡನಿಗೆ 40 ವರ್ಷ ವಯಸ್ಸಾಗಿತ್ತು ಅಂದರೆ ಸರಿಯಲ್ಲ. ನನ್ನ ಗಂಡನಿಗೆ 28 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ಆಧಾರ ಕಾರ್ಡ್ ಅನ್ನು ಹಾಜರುಪಡಿಸಿರುತ್ತೇನೆ.

ಅಪಘಾತ ಕಾಲಕ್ಕೆ ಟಾಟಾ ಏಸ ವಾಹನದ ಚಾಲಕನಿಗೆ ಡಿ.ಎಲ್.ಇರಲಿಲ್ಲ ಅಂದರೆ ಇದ್ದಿರಬಹುದು. ಸಂಪೂರ್ಣ ಅಂತಿಮ ವರದಿಯನ್ನು ಹಾಜರುಪಡಿಸಲು ನನಗೆ ಯಾವುದೇ ತಕರಾರು ಇರುವುದಿಲ್ಲ ಅಂದರೆ ಸರಿ. ಈ ಅರ್ಜಿಗೆ ಅನುಕೂಲವಾಗುವಂತಹ ದಾಖಲೆಗಳನ್ನು ಮಾತ್ರ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ. ಟಾಟಾ ಏಸ ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲದಿದ್ದು 2 ನೇ ಎದುರುದಾರರು ಪರಿಹಾರ ನೀಡಲು ಬಾದ್ಯಸ್ಥರಲ್ಲ ಅಂದರೆ ಸರಿಯಲ್ಲ. ನನಗೆ ಅಪಘಾತದ ಬಗ್ಗೆ ವೈಯಕ್ತಿಕವಾಗಿ ಏನೂ

ಗೊತ್ತಿಲ್ಲದಿದ್ದರಿಂದ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಗಂಡನ ಅಂತಿಮ ಸಂಸ್ಕಾರಕ್ಕೆ ರೂ.50 ಸಾವಿರ ಖರ್ಚು ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನನ್ನ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ಮಕ್ಕಳು ವಾಸವಿದ್ದೇವು ಅಂದರೆ ನನ್ನ ಮಾವ ಸಹ ವಾಸವಿರುತ್ತಾರೆ. ನನ್ನ ಗಂಡನಿಗೆ ಒಬ್ಬ ತಮ್ಮ ಇರುತ್ತಾರೆ. ನನ್ನ ಮಾವ ನನ್ನ ಗಂಡನ ತಮ್ಮನೊಂದಿಗೆ ವಾಸವಿರುತ್ತಾರೆ ಅಂದರೆ ಸರಿ ಸಾಕ್ಷಿಯು ಮುಂದುವರೆದು ತಾವು ಮತ್ತು ತಮ್ಮ ಗಂಡನ ತಮ್ಮ ಜೊತೆಯಲ್ಲೇ ವಾಸವಿರುವುದಾಗಿ ನುಡಿಯುತ್ತಾರೆ.

ಅಪಘಾತದ ಬಗ್ಗೆ ದೂರನ್ನು ನಮ್ಮ ಮಾವ ಕೊಟ್ಟಿರುತ್ತಾರೆ. ನಾನು ಮತ್ತು ನನ್ನ ಗಂಡ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವು ಎಂದು ದೂರಿನಲ್ಲಿ ಹೇಳಿರುತ್ತಾರೆ ಅಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಖೊಟ್ಟಿ ದೂರನ್ನು ನನ್ನ ಮಾವ ನೀಡಿರುತ್ತಾರೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದ**

ಅಪಘಾತ ನನ್ನ ಗಂಡನ ತಪ್ಪಿನಿಂದ ಆಗಿರುತ್ತದೆ ಅಂದರೆ ಸರಿಯಲ್ಲ. ಟಾಟಾ ಏಸ ವಾಹನದ ವಿಮೆ ಚಾಲ್ತಿಯಲ್ಲಿದ್ದುದ್ದರಿಂದ 1 ನೇ ಎದುರುದಾರರು ಪರಿಹಾರ ನೀಡಲು

ಬಾದ್ಯಸ್ಥರಲ್ಲ ಅಂದರೆ ಸರಿಯಲ್ಲ. (ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು 1 ನೇ ಎದುರುದಾರರ ಪರ ವಕೀಲರು ವಿನಂತಿಸಿರುತ್ತಾರೆ)

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿ/-

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ

ಧಾರವಾಡ.